(ಇಂದು ದಿನಾಂಕ 07.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- ಎದುರುದಾರರ ಪರ ವಕೀಲರಿಂದ:-**

ನನಗೆ ಕನ್ನಡ ಮಾತನಾಡಲು ಬರುತ್ತದೆ. ನನ್ನ ಮೊದಲನೇ ಹೆಂಡತಿಯ ಹೆಸರು ರೋಸ್ ಮೇರಿ. 1984 ರಲ್ಲಿ ನನ್ನ ಮೊದಲ ಮದುವೆ ಆಯಿತು. ನನಗೆ ಮೊದಲನೇ ಮದುವೆಯಲ್ಲಿ ಮಕ್ಕಳು ಇದ್ದರು. ನನಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು. ನನಗೆ ಮೊದಲ ವಿಚ್ಛೇದನ ಆದಾಗ ನನ್ನ ಮಕ್ಕಳ ವಯಸ್ಸು 13 ಹಾಗೂ 8 ವರ್ಷ. ನನ್ನ ಮೊದಲನೇ ಹೆಂಡತಿ ಸಾಕಷ್ಟು ಸಂಬಂಧಿಕರು ಇದ್ದಾರೆ. ನಾನು ಮೊದಲನೇ ಹೆಂಡತಿಯೊಂದಿಗೆ ಸೇಂಟ್ ಥಾಮಸ್ ರಸ್ತೆಯಲ್ಲಿ 10 ವರ್ಷ ವಾಸವಾಗಿದ್ದರು. ನನ್ನ ಮೊದಲನೇ ಸ್ಟೇನೋಗ್ರಫಿ ಮಾಡಿದ್ದರು. ನಾನು ನನ್ನ ಮೊದಲನೇ ಹೆಂಡತಿ ಪರಸ್ಪರ ವಿಚ್ಛೇದನ ಪಡೆದಿರುತ್ತೇವೆ. ನನಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ. ಸುಮಾರು 50 ವರ್ಷದಿಂದ ಮದ್ಯಪಾನ ಮಾಡುತ್ತೇನೆ. ಮದ್ಯಪಾನ ಮಾಡುವಾಗ ನಾನು ಒಬ್ಬನೇ ಮಾಡುತ್ತೇನೆ. ನನಗೆ ಸ್ನೇಹಿತರು ಕಡಿಮೆ. 1999-2000 ರಲ್ಲಿ ನಾನು ವರಮಾವಿನ ಬಳಿ ಜಮೀನನ್ನು ಖರೀದಿಸಿರುತ್ತೇನೆ. ನಾನು ಆ ಜಮೀನಿನಲ್ಲಿ ನರ್ಸರಿ ಮಾಡಿದ್ದೆ. ನಾನು ಅಲ್ಲಿ ಕುರಿಯನ್ನು ಸಾಕಿದ್ದೆ. 6-7 ವರ್ಷಗಳ ನಂತರ ನಾನು 2 ನೇ ಮದುವೆ ಆಗಿರುತ್ತೇನೆ. 2 ನೇ ಮದುವೆ ಆದ ನಂತರ ನಾನು ಕುರಿ, ಮೇಕೆ ಸಾಕಲು ಪ್ರಾರಂಭಿಸಿದೆ. ನನ್ನ ನರ್ಸರಿಗೆ ನನ್ನ ಸ್ನೇಹಿತರು ಬರುತ್ತಿರಲಿಲ್ಲ. 2 ನೇ ಎದುರುದಾರನು 15 ವರ್ಷಗಳಿಂದ ಗೊತ್ತು. 2 ನೇ ಮದುವೆಗೆ ಮುಂಚೆ 2 ನೇ ಎದುರುದಾರರು ಗೊತ್ತಿದ್ದರು ಎಂದರೆ ಗೊತ್ತಿಲ್ಲ. 2 ನೇ ಎದುರುದಾರರ ನನ್ನ ಬಳಿ ಕೆಲಸ ಮಾಡುತ್ತಿದ್ದ. ನಾನು ಚಿತ್ರಕಾರರನ್ನು ನೇಮಿಸಿದ್ದೆ, ಅವರಿಗೆ ಸಹಾಯ ಮಾಡಲು 2 ನೇ ಎದುರುದಾರರನ್ನು ಹೊಂದಿದ್ದೆ. ಚಿತ್ರಕಾರನ ಹೆಸರು ನೆಲ್ಸನ್ ಸ್ಯಾಮುಯಲ್. ಕೆಲಸ ಇದ್ದಾಗ ಚಿತ್ರಕಾರನು ಬರುತ್ತಿದ್ದ. 2 ನೇ ಎದುರುದಾರರು ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದರು ಗೊತ್ತಿಲ್ಲ, ಕೆಲಸ ಇದ್ದಾಗ ಬರುತ್ತಿದ್ದರು. 1965 ರಿಂದ ನಾನು ಚಿತ್ರಕಲೆ ಕೆಲಸ ಮಾಡುತ್ತಿದ್ದೆ. 1999 ರಿಂದ 2 ನೇ ಎದುರುದಾರರು ಕೆಲಸಕ್ಕೆ ಬರುತ್ತಿದ್ದರು, ಆಗ 2 ನೇ ಎದುರುದಾರರು ಪರಿಚಯವಿರಲಿಲ್ಲ. ನನಗೆ 2 ನೇ ಎದುರುದಾರರ ಪರಿಚಯವಿರಲಿಲ್ಲ. ನನ್ನ ಚಿತ್ರಕಾರರ ಬಳಿ ಕೆಲಸಗಾರ ಅಷ್ಟೇ. ನನ್ನ, ನನ್ನ ಹೆಂಡತಿಯ ನಡುವೆ ಸರಿ ಬರದ ಕಾರಣ ವಿಚ್ಛೇದನ ಪಡೆದಿರುತ್ತೇವೆ. ಯಾವ ವರ್ಷ ವಿಚ್ಛೇದನ ಆಯಿತು ಎಂದು ನನಗೆ ನೆನಪಿಲ್ಲ. ಹೊರಮಾವಿನಲ್ಲಿ ನಾನು ಒಬ್ಬನೇ ವಾಸವಾಗಿದ್ದೇನೆ. 2 ನೇ ಮದುವೆ ಆದಾಗ ನಾನು ಹೊರಮಾವಿನಲ್ಲಿ ವಾಸವಾಗಿದ್ದೆ. ಅಲ್ಲಿ ನಾನು ನನ್ನ ಹೆಂಡತಿ ಮಾತ್ರ ಇದ್ದೆವು. ಸುಮಾರು 7 ವರ್ಷಗಳ ಕಾಲ ವಾಸವಿದ್ದೆವು. ರೆಸಾರ್ಟನ್ನು ನಾನು ಇನ್ನೂ ಪ್ರಾರಂಭಿಸಿರುವುದಿಲ್ಲ, ಪ್ರಾರಂಭಿಸಲು ಇನ್ನು ಅನುಮತಿ ಪಡೆದಿಲ್ಲ. 2 ನೇ ಮದುವೆಯಲ್ಲಿ ಇಬ್ಬರೂ ಗಂಡು ಮಕ್ಕಳು ಇದ್ದಾರೆ. ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಒಬ್ಬ ಹಾಸ್ಟೇಲ್ ನಲ್ಲಿ ಇದ್ದಾನೆ, ಮತ್ತೊಬ್ಬ ಹೆಂಡತಿಯ ಜೊತೆ ಇದ್ದಾನೆ. ಶಾಮಲ ಎನ್ನುವವರ ಪರಿಚಯ ಇದೆ. ನನ್ನ ಹಾಗೂ

ಅವರ ನಡುವೆ ವ್ಯವಹಾರ ಇದೆ ಎಂದರೆ ಸರಿಯಲ್ಲ. ಅವರು ನನ್ನ ವೈದ್ಯರು. ಶಾಮಲ ನನ್ನ 2 ನೇ ಹೆಂಡತಿಯ ಮೇಲೆ ಒಂದು ಚೆಕ್ಕಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣವನ್ನು ನಾನೇ ರಾಜಿ ಮಾಡಿಸಿದ್ದೇನೆ ಎಂದರೆ ಸರಿ. ಶಾಮಲ ಅವರಿಗೆ ನನ್ನ ಚೆಕ್ಕನ್ನು ನೀಡಿದ್ದೇನೆ. ನಾನು ನನ್ನ ಹೆಂಡತಿಯ ಮನೆಗೆ ಈಗಲೂ ಹೋಗಿ ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಜನವರಿ 6 ರಂದು ಹೆಂಡತಿಯ ಮನೆಗೆ ಹೋಗಿದ್ದೆ, ರಾತ್ರಿ ಅಲ್ಲೇ ಇದ್ದೆ. ನಾನು ಅವಾಗವಾಗ ಹೆಂಡತಿ ಮನೆಗೆ ಹೋಗಿ ಬರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.